# The Karnataka Minorities Development Corporation Ltd.,

(A Government of Karnataka Undertaking)
'Vishveswarayya Centre', 12th floor, Main Tower, Dr. B.R.Ambedkar Veedi,
Bangalore- 560001.
Telephone : (O) 22864782 , Website : www.kmdc.in

---

No. KMDC/2010-11/ Date: 5-06- 2010

The Editor
Sahara Urdu
News Paper
**Bangalore**

Sir,

We request you to kindly publish the following News Item, free of cost, in your esteemed daily for the information of the general public:

---

## ಪತ್ರಿಕಾ ಪ್ರಕಟಣೆ

ಸಂಖ್ಯೆ: ಕ.ಅ.ನಿ:ಸಾ ಯೋ/ಸಿಆರ್/2010-11 ದಿನಾಂಕ: 08/06/2010

ರಾಜ್ಯದ ಮತೀಯ ಅಲ್ಪಸಂಖ್ಯಾತರ ವರ್ಗಗಳ ಜನರ ಸ್ವಯಂ ಉದ್ಯೋಗಕ್ಕಾಗಿ ಮತ್ತು ಆರ್ಥಿಕ ಅಭಿವೃದ್ಧಿಗೆ ನಿಗಮದಿಂದ ಲಭ್ಯವಾಗುವ ಸವಲತ್ತುಗಳಿಗಾಗಿ 2010-11ನೇ ಸಾಲಿಗೆ ವಿವಿಧ ಯೋಜನೆಗಳಲ್ಲಿ ಅರ್ಹ ಅಲ್ಪಸಂಖ್ಯಾತರ ಅರ್ಜಿದಾರರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ನಿಗಮದ ಎಲ್ಲಾ ಯೋಜನೆಗಳಲ್ಲಿ ಶೇ. ೮೦ರಷ್ಟು ಮುಸ್ಲಿಂ, ಶೇ.10 ರಷ್ಟು ಕ್ರಿಶ್ಚಿಯನ್ ಮತ್ತು ಶೇ.10ರಷ್ಟು ಜೈನ್ , ಸಿಖ್ಖರು, ಭೌದ್ದರು ಮತ್ತು ಪಾರ್ಸಿ ಜನಾಂಗದವರುಗಳಿಗೆ ಸರ್ಕಾರದ ಮೀಸಲಾತಿಯನ್ವಯ ಸೌಲಭ್ಯ ಒದಗಿಸಲು ಕ್ರಮವಹಿಸಲಾಗುವುದು. ಒಂದು ವೇಳೆ ಮೀಸಲಾತಿಯನ್ವಯ ಅರ್ಜಿಗಳು ಲಭ್ಯವಿಲ್ಲದಿದ್ದಲ್ಲಿ, ಲಭ್ಯವಿರುವ ಜನಾಂಗದ ಅರ್ಜಿಗಳನ್ನು ಪರಿಗಣಿಸಿ ನಿಗದಿತ ಗುರಿಯನ್ವಯ ಆಯ್ಕೆ ಮಾಡಲಾಗುವುದು. ನಿಗಮದ ಎಲ್ಲಾ ಯೋಜನೆಗಳಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮತ್ತು ಅಂಗವಿಕಲರಿಗೆ ಹಾಗೊ ಮಾಜಿ ಸೈನಿಕರಿಗೆ ಶೇ.3 ರಷ್ಟು ಗುರಿಯನ್ನು ಪರಿಗಣಿಸಿ ಆಧ್ಯತೆ ಮೇರೆಗೆ ಸೌಲಭ್ಯ ಒದಗಿಸಲಾಗುವುದು.

**ಸಾಮಾನ್ಯ ಅರ್ಹತೆಗಳು** :- ರಾಜ್ಯದ ಖಾಯಂ ನಿವಾಸಿಯಾಗಿದ್ದು ಅಲ್ಪಸಂಖ್ಯಾತರ ವರ್ಗಕ್ಕೆ ಅಂದರೆ ಮುಸ್ಲಿಂ, ಕ್ರಿಶ್ಚಿಯನ, ಜೈನ್, ಸಿಖ್ಖರು, ಭೌದ್ದರು, ಮತ್ತು ಪಾರ್ಸಿ ವರ್ಗಕ್ಕೆ ಸೇರಿದವರಾಗಿರಬೇಕು. ವಾರ್ಷಿಕ ಆದಾಯ ರೂ. 22,000/-ಗಳಿಗಿಂತ ಕಡಿಮೆ ಇರಬೇಕು ಹಾಗೂ ವಯೋಮಿತಿ 18 ರಿಂದ 55 ವರ್ಷದೊಳಗಿರಬೇಕು.

## ರಾಜ್ಯ ಸರ್ಕಾರದ ಯೋಜನೆಗಳು

**1."ಸ್ವಾವಲಂಬನಾ" ಮಾರ್ಜಿನ ಹಣ ಸಾಲ ಮತ್ತು ಸಹಾಯಧನ ಯೋಜನೆ:-** ವಿವಿಧ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳ ಮೂಲಕ ಮತೀಯ ಅಲ್ಪಸಂಖ್ಯಾತರ ಜನರು ಪ್ರಾರಂಭಿಸುವ ಅಥವಾ ಅಭಿವೃದ್ಧಿಪಡಿಸುವ ಆರ್ಥಿಕ ಚಟುವಟಿಕೆಗಳಿಗೆ ಸಾಲದ ಮೊತ್ತ ಗರಿಷ್ಠ 1.00 ಲಕ್ಷ ರೂ.ಗಳಾಗಿದ್ದು ಇದರಲ್ಲಿ ನಿಗಮದಿಂದ ಗರಿಷ್ಠ ಸಹಾಯಧನ ರೂ. 5,000/- ಹಾಗೂ ವಾರ್ಷಿಕ 7ರೂ.ಗಳ ಬಡ್ಡಿದರದಲ್ಲಿ ಮಾರ್ಜಿನ ಹಣ ಸಾಲ ಗರಿಷ್ಟ 20,000/-ರೂ.ಗಳು ಮತ್ತು ಉಳಿದ ಮೊತ್ತವನ್ನು ರಾಷ್ಟ್ರೀಕೃತ ಹಣಕಾಸು ಸಂಸ್ಥೆಗಳ ಮೂಲಕ ಮಂಜೂರು ಮಾಡಲಾಗುವುದು.

**2. ಅರಿವು (ವಿದ್ಯಾಭ್ಯಾಸ ಸಾಲ) ಯೋಜನೆ:-** ಎಂ.ಬಿ.ಬಿ.ಎಸ್, ಇಂಜಿನಿಯರಿಂಗ್, ಬಿ.ಡಿ. ಎಸ್, ಬಿ.ಸಿ.ಎ, ಎಂ.ಸಿ.ಎ, ಎಂ.ಬಿ.ಎ, ಎಂ.ಕಾಂ, ಪಿ.ಹೆಚ್.ಡಿ, ಎಂ.ಎಸ್ಸಿ, ಡಿ.ಇಡಿ, ಬಿಇಡಿ, ಡಿಪ್ಲೋಮೋ, ಮುಂತಾದ ವೃತ್ತಿಪರ ಹಾಗೂ ಪ್ಯಾರಾಮೇಡಿಕಲ್ ಕೋರ್ಸುಗಳಲ್ಲಿ ವ್ಯಾಸಾಂಗ ಮಾಡುತ್ತಿರುವ ಮತೀಯ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಅವರ ವ್ಯಾಸಂಗಕ್ಕೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಗರಿಷ್ಠ ರೂ. 75,000/-ಗಳ ವರೆಗೊ ಆಯಾ ವ್ಯಾಸಂಗದ ಅವಧಿಗೆ ಅನುಗುಣವಾಗಿ ಸಾಲ ಸಾಲಸೌಲಭ್ಯವನ್ನು ವಾರ್ಷಿಕ ರೂ. 2 ರ ಬಡ್ಡಿದರದಲ್ಲಿ ಒದಗಿಸಲಾಗುವುದು.

**3. ಗಂಗಾಕಲ್ಯಾಣ ಯೋಜನೆ:-** ಗ್ರಾಮೀಣ ಭಾಗದಲ್ಲಿ ನೆಲೆಸಿರುವ ಅಲ್ಪಸಂಖ್ಯಾತರ ಹೆಚ್ಚಿನ ಜನರು ಕೃಷಿಯನ್ನು ಪಧಾನ ಕಸಬನ್ನಾಗಿ ಹೊಂದಿರುತ್ತಾರೆ. ಹಾಗೂ ಈ ರೈತರ ಅಸ್ಥಿರ ಬದುಕಿಗೆ ಆಸರೆಯನ್ನು ಕಲ್ಪಿಸಲು ಅವರುಗಳ ಒಣ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ನಿಗಮವು ಗಂಗಾ ಕಲ್ಯಾಣ ಯೋಜನೆಯನ್ನು ಜಾರಿಗೆ ತಂದಿರುತ್ತದೆ.

ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಮಾತ್ರ ಒಂದು ಕಡೆ ಕನಿಷ್ಠ -02 ಎಕರೆ ಜಮೀನು ಹಾಗೂ ಗರಿಷ್ಠ-05 ಎಕರೆ ಜಮೀನು ಇರುವವರಿಗೆ ರೂ. 1.00 ಲಕ್ಷ ವೆಚ್ಚದ 01 ಕೊಳವೆ ಬಾವಿ ಕೊರೆದು ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು. ಇದರಲ್ಲಿ ರೂ.86,000/- ಗಳ ಸಹಾಯಧನ, ಅವಶ್ಯಕತೆ ಇದ್ದಲ್ಲಿ ಗರಿಷ್ಠ ರೂ.14.000/- ಗಳ ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಮಂಜೂರು ಮಾಡಲಾಗುವುದು.

**4. ಶ್ರಮಶಕ್ತಿ ಯೋಜನೆ :-** ಮತೀಯ ಅಲ್ಪಸಂಖ್ಯಾತರ ಕುಶಲ ಕರ್ಮಿಗಳಿಗೆ ಅವರ ವೃತ್ತಿ ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸಿಕೊಳ್ಳಲು ಅಗತ್ಯವಿರುವ ತರಬೇತಿಯೊಂದಿಗೆ ಗರಿಷ್ಠ 25,000/- ರೂ. ಗಳ ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಕೊಡಲಾಗುವುದು. ಈ ಯೋಜನೆಯಲ್ಲಿ ಶೇ.75 ರಷ್ಟು ಸಾಲ ಎಂದು ಹಾಗೂ ಶೇ.25 ರಷ್ಟು ಸಹಾಯಧನವನ್ನು ಬ್ಯಾಕ್ ಎಂಡ್ ಸಬ್ಸಿಡಿಯಾಗಿ ಪರಿಗಣಿಸಲಾಗುವುದು.

**5. ಮೈಕ್ರೋ ಕ್ರೆಡಿಟ್ ಯೋಜನೆ:-** ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಅನಕ್ಷರಸ್ಥ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಕುಶಲ ಅಥವಾ ಕುಶಲಿಯಲ್ಲದ ವ್ಯಕ್ತಿಗಳ ಅಭಿವೃದ್ಧಿಗಾಗಿ ಸಣ್ಣ ಪ್ರಮಾಣದ ವ್ಯಾಪಾರ ಮಾಡಲು ಸಾಲ ಸೌಲಭ್ಯ ಕಲ್ಪಿಸಲಾಗುತ್ತದೆ. ಅಲ್ಪಸಂಖ್ಯಾತರಿಗೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳನ್ನು.

ಕೈಗೊಳ್ಳುವ ಅಲ್ಪಸಂಖ್ಯಾತರ ಮಹಿಳಾ ಸ್ತ್ರೀ ಶಕ್ತಿ ಮತ್ತು ಸ್ವ ಸಹಾಯ ಗುಂಪುಗಳಿಗೆ ಆರ್ಥಿಕ ನೆರವು ನೀಡುವುದು ಉದ್ದೇಶವಾಗಿರುತ್ತದೆ. ಸದರಿ ಯೋಜನೆಯಡಿಯಲ್ಲಿ ಪ್ರತಿ ಫಲಾನುಭವಿಗೆ ಗರಿಷ್ಠ 10,000 ರೂ.ಗಳ ಘಟಕ ವೆಚ್ಚ ನಿಗದಿಪಡಿಸಲಾಗಿದೆ. ಇದರಲ್ಲಿ ರೂ. 2500 ಸಹಾಯಧನ ಹಾಗೂ ರೂ.7500 ಅವಧಿಸಾಲ ಒಳಗೊಂಡಿರುತ್ತದೆ.

ನಿಗದಿತ ಅರ್ಜಿಗಳು ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಸಂಬಂಧಪಟ್ಟ ಜಿಲ್ಲೆಗಳ, ಜಿಲ್ಲಾ ವ್ಯವಸ್ಥಾಪಕರ ಕಛೇರಿಗಳಿಂದ ಪಡೆಯಬಹುದು. ಹಾಗೂ ನಿಗಮದ ಅಂತರ್ಜಾಲ (ಇಂಟರ್ ನೆಟ್) www.kmdc.in, ನಲ್ಲಿ ಪಡೆಯಬಹುದಾಗಿರುತ್ತದೆ. ನಿಗದಿತ ಅರ್ಜಿಗಳಲ್ಲಿ ಮಾಹಿತಿ ಭರ್ತಿಮಾಡಿ ಅಗತ್ಯ ದಾಖಲಾತಿಗಳೊಂದಿಗೆ ದಿನಾಂಕ: 31-07-2010 ರ ಒಳಗೆ ಸಂಬಂಧಪಟ್ಟ ಜಿಲ್ಲಾ ಕಛೇರಿಯಲ್ಲಿ ಸಲ್ಲಿಸುವುದು. ಅವಧಿ ಮುಗಿದ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

---

Thanking You,

Yours Faithfully

Managing Director